

## ಕೃಷ್ಣಮೂರ್ತಿ ಹನೂರು

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ಎಮಿರಿಟಸ್ ಪ್ರಾಧ್ಯಾಪಕರಾಗಿದ್ದಾರೆ. 40ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರ 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕಾದಂಬರಿ ಓದುಗರ ಮೇರೆಯಿಲ್ಲದ ಮೆಚ್ಚುಗೆ ಪಡೆದಿದೆ. ಅದೀಗ ನಾಲ್ಕನೆಯ ಮುದ್ರಣವನ್ನು ಕಂಡಿರುತ್ತದೆ.

'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ' ಮತ್ತು 'ಕಳೆದ ಮಂಗಳವಾರ ಮುಸ್ಸಂಜೆ' ಅವರ ಕಥಾಸಂಕಲನಗಳು. 'ಬಾರೋ ಗೀಜಗನೆ', 'ನಿಕ್ಷೇಪ' ಅವರ ಇನ್ನೆರಡು ಕಾದಂಬರಿಗಳು. ಜಾನಪದಕ್ಕೆ ಸಂಬಂಧಿಸಿದಂತೆ ಹಲವಾರು ಕೃತಿಗಳನ್ನು ಅವರು ಸಂಪಾದಿಸಿದ್ದಾರೆ. ಅವರು ಸಂಪಾದಿಸಿದ ವಿಶ್ವಕೋಶ 'ಎನ್‌ಸೈಕ್ಲೋಪಿಡಿಯಾ ಆಫ್ ಫೋಕ್‌ಕಲ್ಚರ್ ಆಫ್ ಕರ್ನಾಟಕ' ಕನ್ನಡ ಜಾನಪದವನ್ನು ಇಂಗ್ಲಿಷ್‌ನಲ್ಲಿ ಪರಿಚಯಿಸುತ್ತದೆ. ಇದನ್ನು ಹನೂರು ಚೆನ್ನೈನಲ್ಲಿ ನಾಲ್ಕು ವರ್ಷ ಇದ್ದು ಸಂಪಾದಿಸಿದ್ದಾರೆ. ಇದನ್ನು ಚೆನ್ನೈನ 'ಇನ್‌ಸ್ಟಿಟ್ಯೂಟ್ ಆಫ್ ಏಷ್ಯನ್ ಸ್ಟಡೀಸ್' ಪ್ರಕಟಿಸಿದೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರವಾಗಿದ್ದು, ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯ ಪ್ರಕಟಿಸಿದೆ. ಹನೂರರು ಶಾಸನ, ಹಳಗನ್ನಡ ಮತ್ತು ಜಾನಪದ ಅಧ್ಯಯನಗಳ ಕೊಂಡಿಯಂತಿದ್ದಾರೆ.

ಹಂಚಿ ಉಣ್ಣಬೇಕು. ವಾರವೆಲ್ಲ ಇದಾಗದಿದ್ದರೂ ಸೋಮವಾರ, ಶುಕ್ರವಾರವಾದರೂ ಆಗಬೇಕು. ಇದಕ್ಕೆ ಕಾರಣ ಬಡತನವಲ್ಲ. ಮಾದೇಶ್ವರ ಇಲ್ಲವೇ ಮಂಟೇಸ್ವಾಮಿಯ ಮಠದ ಗುರುಗಳು, ಬರುತ್ತಿದ್ದ ಭಕ್ತರ ಮಕ್ಕಳಿಗೆ ಕೊಡುತ್ತಿದ್ದ ದೀಕ್ಷೆಯೇ ಹಾಗಿರುತ್ತಿತ್ತು. ಯಾರನ್ನೂ ಬಾಯೆತ್ತಿ ಬಯ್ಯಬಾರದು, ಕೊಟ್ಟು ಉಣ್ಣಬೇಕು ಎಂಬುದು ದೀಕ್ಷಾ ವಿಧಾನದ ಎರಡು ಮುಖ್ಯ ತತ್ವಗಳು. ಇದೇನೇ ಇರಲಿ ನನ್ನ ಸುತ್ತಿನ ಮಳೆ, ಜನಪದ ಜೀವನ ಕ್ರಮ, ಗುಡಿಯಲ್ಲಿ ಕುಮಾರವ್ಯಾಸ, ತೊರವೆಯ ನರಹರಿ, ರಾಘವಾಂಕ, ಗೋವಿನ ಕಥೆಯ ಸಂಗತಿಗಳು ಇವು ನನ್ನೊಂದಿಗೆ ಇದ್ದರೂ ಇವು ನಾನು ಬರೆಯಬಹುದಾದವು ಎಂದು ಅನಿಸಿರಲೇ ಇಲ್ಲ. ಜೀವಿ ಅವರು ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಮಾತಾಡಿಸಿ ನನ್ನ ಬಳಿ ಬರುವಲ್ಲಿ ಏನೂ ಬರೆಯಲಾಗದೆ ನಮ್ಮ ಊರಿನ ಮಳೆಯ ಬಗ್ಗೆ ಬರೆದಿದ್ದೆನಷ್ಟೆ.

ಏಳೆಂಟು ದಿನ ಒಂದೇ ಸಮ ಮಳೆ ಹೊಡೆದು ತೆಂಕಲ ಕಾಡಿಂದ ಹರಿದು ಬರುತ್ತಿದ್ದ ನಮ್ಮೂರ